# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 23.07.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಬರುವ ಎನ್.ಜಿ.ಇ.ಎಫ್ ರಸ್ತೆಯಿಂದ ಭದ್ರಪ್ಪ ವೃತ್ತದವರೆಗಿನ ರಿಂಗ್ ರಸ್ತೆಯಲ್ಲಿ ದಿನಾಂಕ: 17.07.2011 ರಂದು ಅನಧಿಕೃತವಾಗಿ ಕಸವನ್ನು ಸುರಿಯುತ್ತಿದ್ದ ವಾಹನ ಸಂಖ್ಯೆ: ಕೆಎ-02-ಎಎ-1060 ವಾಹನವನ್ನು ಜಪ್ತಿ ಮಾಡಿ, ಪಾಲಿಕೆ ವಶಕ್ಕೆ ಪಡೆಯಲಾಗಿದೆ.

ರಿಂಗ್ ರಸ್ತೆಯಲ್ಲಿ ಅನಧಿಕೃತವಾಗಿ ಕಸವನ್ನು ಸುರಿಯುತ್ತಿದ್ದ ಹಿನ್ನೆಲೆಯಲ್ಲಿ ದಿನಾಂಕ: 18.07.2011 ರಂದು ಸದರಿ ವಾಹನದ ಮಾಲೀಕರಿಗೆ ರೂ.5,000/- (ಐದು ಸಾವಿರ ರೂ.ಗಳು) ದಂಡ ವಿಧಿಸಿ, ವಸೂಲು ಮಾಡಲಾಗಿದೆ. ಸದರಿ ಪ್ರದೇಶದಲ್ಲಿ ಇರುವ ಅನುಪಯುಕ್ತ ಸಾಮಗ್ರಿಗಳನ್ನು ತೆರವುಗೊಳಿಸುವ ಷರತ್ತಿಗೊಳಪಡಿಸಿ ವಾಹನವನ್ನು ಬಿಡುಗಡೆ ಮಾಡಿ, ಇಂತಹ ಪ್ರಕರಣಗಳನ್ನು ಮರುಕಳಿಸದಂತೆ ಎಚ್ಚರಿಕೆ ನೀಡಿ ಆದೇಶಿಸಲಾಗಿದೆ ಎಂದು ಮಹದೇವಪುರ ವಲಯದ ಜಂಟಿ ಆಯುಕ್ತರಾದ ಶ್ರೀ ಕೆ.ಎನ್. ದೇವರಾಜು ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**